The Mahatma Gandhi National Rural Employment Guarantee Act 2005
Ministry of Rural Development
Government of India

# ಜಿಲ್ಲಾ ಪಂಚಾಯತ್, ಬಳ್ಳಾರಿ

ಮಹಾತ್ಮಾಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಕೋಶ. ಕೋಟೆ, ಬಳ್ಳಾರಿ-583102

Email:-ceo_zp_bly@nic.in, dsdev-zp-kabl@nic.in , Phone :08392-266130, Fax:08392-267200

ಸಂ:ಜಿಪಂಬ/ಉಖಾಯೋ-ಕೋಶ/ಹೊ.ಗು.ಹುದ್ದೆ ಭರ್ತಿ/24/2022-2023 ದಿ:-16.08.2022

ಇವರಿಗೆ,

1. ಮನಿಷ್ ಮ್ಯಾನ್ ಪವರ್ ಏಜೆನ್ಸಿ
ಶಾಪ್-ನಂ-ಬಿ ಎಫ್-10ಎ, ಜಾಜೀ ಆರ್ಕೇಡ್,
ಎಸ್ ಬಿ ಕಾಲೇಜ್ ರೋಡ್, ಸಂಗಮೇಶ್ವರ ನಗರ,
ಕಲಬುರಗಿ-585103.
2. ತಾಂತ್ರಿಕ ನಿರ್ದೇಶಕರು,
ಎನ್.ಐ.ಸಿ. ಜಿಲ್ಲಾ ಪಂಚಾಯತ್, ಬಳ್ಳಾರಿ

ಮಾನ್ಯರೇ,

ವಿಷಯ:- ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ಅನುಷ್ಠಾನಕ್ಕಾಗಿ ಜಿಲ್ಲಾ ವ್ಯಾಪ್ತಿಯಲ್ಲಿ ಖಾಲಿ ಇರುವ ಹೊರಗುತ್ತಿಗೆ ಆಧಾರದ ಹುದ್ದೆಗಳಿಗೆ ಅರ್ಜಿ ಆಹ್ವಾನಿಸುವ ಬಗ್ಗೆ ಅಗತ್ಯ ಕ್ರಮ ವಹಿಸುವ ಕುರಿತು.

ಉಲ್ಲೇಖ:- 1. ತಮ್ಮ ಸಂಸ್ಥೆಯೊಂದಿಗೆ ಮಾಡಿಕೊಂಡಿರುವ ಕರಾರು ಒಪ್ಪಂದ ದಿನಾಂಕ:19.07.2013 ಹಾಗೂ ದಿನಾಂಕ:08.01.2014.
2.ಮಾನ್ಯ ಸರ್ಕಾರದ ಪತ್ರ ಸಂ:ಗ್ರಾ.ಅ.ಪ/104/ಉಖಾಯೋ/2007 ದಿನಾಂಕ:05.06.2009
3. ಮಾನ್ಯ ಸರ್ಕಾರದ ಪತ್ರ ಸಂ:ಗ್ರಾ.ಅ.ಪ292 ಉಖಾಯೋ/2012 ದಿನಾಂಕ:30.11.2013
4. ಮಾನ್ಯ ಆಯುಕ್ತರ ಪತ್ರ ದಿನಾಂಕ:20.12.2014
5. ಮಾನ್ಯ ಆಯುಕ್ತರ ಪತ್ರ ಸಂ:ಗ್ರಾ.ಅ.ಪ ಉಖಾಯೋ/2020 ದಿನಾಂಕ:05.04.2021
6. ಮಾನ್ಯ ಸರ್ಕಾರದ ಪತ್ರ ಸಂ:ಗ್ರಾ.ಅ.ಪ.ಉ.ವಿ/66/2021/ಇ-45513 ದಿನಾಂಕ:05.04.2021
7. ಮಾನ್ಯ ಸರ್ಕಾರದ ಪತ್ರ ಸಂ:RDC-EGS/50/2021 ( E-442252) 04.08.2021. 04.03.2021
8. ಮಾನ್ಯ ಸರ್ಕಾರದ ಪತ್ರ ಸಂ:RDC-EGS/29/2020 05.03.2020
9. ಮಾನ್ಯ ಸರ್ಕಾರದ ಪತ್ರ ಸಂ:RDC-EGS/3/2019 ದಿನಾಂಕ:17.09.2019.
10.ಈ ಕಛೇರಿ ಸಮ ಸಂಖ್ಯೆ ಪತ್ರ ದಿನಾಂಕ:27.07.2022.

************

ಈ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮಹಾತ್ಮಗಾಂಧಿ ನರೇಗಾ ಯೋಜನೆಯಡಿ ಜಿಲ್ಲೆಯಲ್ಲಿ ಖಾಲಿ ಇರುವ ಹೊರಗುತ್ತಿಗೆ ಹುದ್ದೆಗಳನ್ನು ಭರ್ತಿ ಮಾಡುವ ಸಂಬಂಧ ಉಲ್ಲೇಖ(2)ರಿಂದ (9)ರ ವರೆಗಿನ ಮಾನ್ಯ ಸರ್ಕಾರದ ವಿವಿದ ಪತ್ರಗಳಲ್ಲಿ ನೀಡಲಾಗಿರುವ ನಿರ್ದೇಶನದಂತೆ ಭರ್ತಿ ಮಾಡಲು ಅಗತ್ಯ ಕ್ರಮ ವಹಿಸಲು ಉಲ್ಲೇಖ(10)ರ ಈ ಕಛೇರಿ ಪತ್ರದ ಮೂಲಕ ತಮಗೆ ಸೂಚಿಸಲಾಗಿರುತ್ತದೆ.

**ಮುಂದುವರೆದು, ಅರ್ಹ ಅಭ್ಯರ್ಥಿಗಳು ಆನ್ ಲೈನ್ ಮೂಲಕ NIC ಜಿಲ್ಲಾ ವೆಬ್ ಸೈಟ್ https://ballari.nic.in ಮೂಲಕ ಅರ್ಜಿ ಸಲ್ಲಿಸಲು Link ಒದಗಿಸಲು ಕ್ರಮ ವಹಿಸುವಂತೆ ತಾಂತ್ರಿಕ ನಿರ್ದೇಶಕರು, ಜಿಲ್ಲಾ ಎನ್.ಐ.ಸಿ ಘಟಕ ಬಳ್ಳಾರಿ ಇವರಿಗೆ ಸೂಚಿಸಲಾದಂತೆ ಎನ್.ಐ.ಸಿ ಘಟಕ ಇವರ ವತಿಯಿಂದ ಅಗತ್ಯ ಕ್ರಮ ವಹಿಸಲಾಗಿರುತ್ತದೆ. ಪ್ರಯುಕ್ತ ಸದರಿ ಲಿಂಕ್ ಅನ್ನು ಬಳಸಿಕೊಂಡು ಅರ್ಹ ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿರುವ ಬಗ್ಗೆ ರಾಜ್ಯ ಮತ್ತು ಜಿಲ್ಲಾಮಟ್ಟದ ಪ್ರಚಲಿತ ದಿನಪತ್ರಿಕೆಗಳಲ್ಲಿ ಜಾಹಿರಾತು ಹೊರಡಿಸಲು ಅಗತ್ಯ ಕ್ರಮ ವಹಿಸಿ ಜಾಹಿರಾತು ಹೊರಡಿಸಿದ ಕುರಿತು ವರದಿಯನ್ನು 18.08.2022ರೊಳಗೆ ಈ ಕಛೇರಿಗೆ ಸಲ್ಲಿಸಲು ಸೂಚಿಸಲಾಗಿದೆ. ಹಾಗೂ ತಾಂತ್ರಿಕ ನಿರ್ದೇಶಕರು, ಎನ್,ಐ.ಸಿ. ಇವರು ಸದರಿ ಜಾಹಿರಾತು ಪ್ರಕಟಣೆಯನ್ನು ಜಿಲ್ಲಾ ಎನ್.ಐ.ಸಿ ವೆಬ್ ಸೈಟ್ ನಲ್ಲಿ ಆರೋಹಿಸುವುದು ಹಾಗೂ ದಿನಾಂಕ:23.08.2022 ರಿಂದ ಅರ್ಹ ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ಅನುವು ಮಾಡಿಕೊಡಲು ಸೂಚಿಸಲಾಗಿದೆ.**

ವಿವರ ಈ ಕೆಳಗಿನಂತಿದೆ:-

| ಕ್ರ.ಸಂ | ಹುದ್ದೆಯ ಹೆಸರು | ಖಾಲಿ ಹುದ್ದೆಗಳ ಸಂಖ್ಯೆ | ವಿದ್ಯಾರ್ಹತೆ ಹಾಗೂ ಅನುಭವ | ವಯೋಮಿತಿ |
|---|---|---|---|---|
| 01 | ತಾಲೂಕು ಸಂಯೋಜಕರು, (TMIS) ಕಂಪ್ಲಿ ತಾಲೂಕು | 01 | MCA/BCA OR BACHELORE OF ENGINEER IN COMPUTER/ ELECTRONICS OR GRADUATION IN COMPUTER SCINCE OR ANY OTHER EQUIVALENT QUALIFICATION | 21 ರಿಂದ 40 ವರ್ಷ ಗಳು |
| 01 | ತಾಂತ್ರಿಕ ಸಹಾಯಕರು (ಸಿವಿಲ್) | 4 | B.E/B.Tech (Civil) | 21 ರಿಂದ 40 ವರ್ಷಗಳು |
| 02 | ತಾಂತ್ರಿಕ ಸಹಾಯಕರು (ತೋಟಗಾರಿಕೆ) | 6 | Graduationl in Horticulture other equivalent qualification with computer knowledge. | 21 ರಿಂದ 40 ವರ್ಷಗಳು |
| 03 | ತಾಂತ್ರಿಕ ಸಹಾಯಕರು (ಅರಣ್ಯ) | 2 | Graduation in Forest & other equivalent qualification with computer knowledge. | 21 ರಿಂದ 40 ವರ್ಷಗಳು |
| 04 | ತಾಂತ್ರಿಕ ಸಹಾಯಕರು (ಕೃಷಿ) | 2 | Graduationl in Agriculture and other equivalent qualification with computer knowledge. | 21 ರಿಂದ 40 ವರ್ಷಗಳು |
| 04 | Administrative Assistar ಆಡಳಿತಾತ್ಮಕ ಸಹಾಯಕರು (ತಾಲೂಕ ಪಂಚಾಯತಿ) | 5 | 1.ವಿದ್ಯಾರ್ಹತೆ:-B.COM<br>2.ಕನಿಷ್ಠ 06 ತಿಂಗಳ ಕಂಪ್ಯೂಟರ್ ಜ್ಞಾನ ಹೊಂದಿರುವ ಬಗ್ಗೆ ಪ್ರಮಾಣ ಪತ್ರ (ಸರ್ಕಾರದ ನೊಂದಾಯಿತ ಸಂಸ್ಥೆಯಿಂದ)<br>3.ಕನ್ನಡ ಮತ್ತು ಇಂಗ್ಲಿಷ್ ಟೈಪಿಂಗ್ ಹಾಗೂ M.S OFFICE ನಲ್ಲಿ ಉತ್ತಮ ಕಾರ್ಯನಿರ್ವಹಣೆಯ ಅನುಭವ | 21 ರಿಂದ 40 ವರ್ಷಗಳು |
| 05 | ಗಣಕ ಯಂತ್ರ ನಿರ್ವಾಹಕರು ತಾಲ್ಲೂಕು ಪಂಚಾಯತಿ ಕಂಪ್ಲಿ & ಕುರುಗೋಡು | 2 | 1.ವಿದ್ಯಾರ್ಹತೆ:-ಯಾವುದೇ ಪದವಿ<br>2.ಕನಿಷ್ಠ 06 ತಿಂಗಳ ಕಂಪ್ಯೂಟರ್ ಜ್ಞಾನ ಹೊಂದಿರುವ ಬಗ್ಗೆ ಪ್ರಮಾಣ ಪತ್ರ (ಸರ್ಕಾರದ ನೊಂದಾಯಿತ ಸಂಸ್ಥೆಯಿಂದ)<br>3.ಕನ್ನಡ ಮತ್ತು ಇಂಗ್ಲಿಷ್ ಟೈಪಿಂಗ್ ಹಾಗೂ M.S OFFICE ನಲ್ಲಿ ಉತ್ತಮ ಕಾರ್ಯನಿರ್ವಹಣೆಯ ಅನುಭವ. | 21 ರಿಂದ 40 ವರ್ಷಗಳು |

1. ಅರ್ಜಿ ಸಲ್ಲಿಸಲು ಪ್ರಾರಂಭದ ದಿನಾಂಕ: 23.08.2022
2. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ:11.09.2022.

3. ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳ ಮೂಲ ದಾಖಲೆಗಳ ಪರಿಶೀಲನೆ ದಿನಾಂಕ:-12.09.2022
4. ಅಭ್ಯರ್ಥಿಗಳ ತಾತ್ಕಾಲಿಕ ಮೆರಿಟ್ ಪಟ್ಟಿಯನ್ನು ಪ್ರಕಟಣೆ ಮಾಡುವ ದಿನಾಂಕ:-19.09.2022
5. ತಾತ್ಕಾಲಿಕ ಮರಿಟ್ ಪಟ್ಟಿಗಳಿಗೆ ಅಭ್ಯರ್ಥಿಗಳಿಂದ ಆಕ್ಷೇಪಣೆ ಸಲ್ಲಿಸುವ ದಿನಾಂಕ:19.09.2022 ರಿಂದ 28.09.2022ರವರೆಗೆ (ತದನಂತರದ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ)
6. ಸಲ್ಲಿಕೆಯಾದ ಆಕ್ಷೇಪಣೆಗಳನ್ನು ಪರಿಶೀಲನೆಮಾಡಿ ಅಂತಿಮ ಆಯ್ಕೆ ಪಟ್ಟಿ ಪ್ರಕಟಣೆ ಮಾಡುವ ದಿನಾಂಕ: 30.09.2022
7. ಆಡಳಿತಾತ್ಮಕ ಸಹಾಯಕ/ಡಾಟಾ ಎಂಟ್ರೀ ಆಪರೇಟರ್ ಹುದ್ದೆಗಳ 1.5ರ ಮೇರಿಟ್ ಪಟ್ಟಿಯಲ್ಲಿನ ಅಭ್ಯರ್ಥಿಗಳಿಗೆ ಕಂಪ್ಯೂಟರ್ ಸಾಕ್ಷರತಾ ಪರಿಕ್ಷೇಯನ್ನು ಹಮ್ಮಿಕೊಳ್ಳುವ ದಿನಾಂಕವನ್ನು ಮುಂದಿನ ದಿನಗಳಲ್ಲಿ ತಿಳಿಸಲಾಗುವುದು.

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ
ಜಿಲ್ಲಾ ಪಂಚಾಯತ್, ಬಳ್ಳಾರಿ

ಪ್ರತಿಯನ್ನು :-

1. ಮಾನ್ಯ ಆಯುಕ್ತರು, ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ,ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಪ್ಲ್ಯಾಟ್ ನಂ.1,2,3,4 ಕೆ.ಎಸ್.ಐ.ಐ.ಡಿ.ಸಿ ರಾಜಾಜಿನಗರ ಐಟಿ ಪಾರ್ಕ್, ಸೌತ್ ಬ್ಲಾಕ್, ರಾಜಾಜಿನಗರ ಇಂಡಸ್ಟ್ರಿಯಲ್ ಎಸ್ಟೇಟ್ ಬೆಂಗಳೂರು-560 044 ಇವರಿಗೆ ಮಾಹಿತಿಗಾಗಿ ಸಲ್ಲಿಸಲಾಗಿದೆ.
2. ತಾಂತ್ರಿಕ ನಿರ್ದೇಶಕರು, ಜಿಲ್ಲಾ ಎನ್.ಐ.ಸಿ. ಘಟಕ ಜಿ.ಪಂ. ಬಳ್ಳಾರಿ ಇವರಿಗೆ ಸೂಕ್ತ ಕ್ರಮಕ್ಕಾಗಿ

ಸೂಚನೆಗಳು :-

- ಆಯ್ಕೆಯಾದ ಅಭ್ಯರ್ಥಿಗಳನ್ನು ಹೊರಗುತ್ತಿಗೆ ಆಧಾರದ ಮೇಲೆ ಮಾನವ ಸಂಪನ್ಮೂಲ ಸಂಸ್ಥೆಯ ಮೂಲಕ ಸೇವೆಗೆ ಪಡೆಯಲಾಗುವುದು.
- ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳು ಅರ್ಜಿ ನಮೂನೆಯಲ್ಲಿ ನಮೂದಿಸಿರುವ ದಾಖಲೆಗಳಾದ ವಿದ್ಯಾರ್ಹತೆ/ಸೇವಾನುಭವಕ್ಕೆ ಸಂಬಂಧಪಟ್ಟ ಎಲ್ಲಾ ಮೂಲ ಪ್ರಮಾಣ ಪತ್ರ/ದಾಖಲೆಗಳನ್ನು ಪರಿಶೀಲನಾ ಸಮಯದಲ್ಲಿ; ಕಡ್ಡಾಯಕವಾಗಿ ಹಾಜರುಪಡಿಸುವುದು ತಪ್ಪಿದಲ್ಲಿ ಅಭ್ಯರ್ಥಿಯ ಅರ್ಜಿಯನ್ನು ತಿರಸ್ಕರಿಸಲಾಗುವುದು.
- ದಾಖಲಾತಿ ಪರಿಶೀಲನೆಯಲ್ಲಿ ಅರ್ಹಗೊಂಡ ಅಭ್ಯರ್ಥಿಗಳನ್ನು ವಿದ್ಯಾರ್ಹತೆ ಹೊಂದಿದ ಅಂಕಗಳು ಹಾಗೂ ಪಡೆದ ಸೇವಾ ಅನುಭವದ ಆಧಾರದ ಮೇಲೆ ಅರ್ಹತಾ ಪಟ್ಟಿಯನ್ನು ತಯಾರಿಸಿ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಪ್ರಚುರಪಡಿಸಲಾಗುವುದು.
- ಸದರಿ ತಾತ್ಕಾಲಿಕ ಮೆರಿಟ್ ಪಟ್ಟಿಗೆ ಆಕ್ಷೇಪಣೆ ಆಹ್ವಾನಿಸಿ ಸಲ್ಲಿಕೆಯಾದ ಆಕ್ಷೇಪಣೆಗಳನ್ನು ನಿಯಮಾನುಸಾರ ಪರಿಶೀಲನೆ ಮಾಡಿ ಅಂತಿಮ ಮೆರಿಟ್ ಪಟ್ಟಿಯನ್ನು ಪ್ರಕಟಣೆಗೊಳಿಸಲಾಗುವುದು.
- ಸದರಿ ಅಂತಿಮ ಮೆರಿಟ್ ಪಟ್ಟಿಯಲ್ಲಿ ಗರಿಷ್ಠ ಅಂಕಗಳನ್ನು ಪಡೆದ ಅಭ್ಯರ್ಥಿಗಳನ್ನು ಸಂಬಂಧಪಟ್ಟ ಹುದ್ದೆಗಳ ಅನುಗುಣವಾಗಿ ಆಯ್ಕೆಗೆ ಪರಿಗಣಿಸಲಾಗುವುದು.
- ಸಂದರ್ಶನ ಇರುವುದಿಲ್ಲ.
- ಖಾಲಿ ಹುದ್ದೆಗಳನ್ನು ಹೆಚ್ಚಿಸುವ ಅಥವಾ ಕಡಿಮೆ ಮಾಡುವ ಅಧಿಕಾರವು ನೇಮಕಾತಿ ಪ್ರಾಧಿಕಾರಿ ಹಾಗೂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಜಿ.ಪಂ.ಬಳ್ಳಾರಿ ರವರು ಹೊಂದಿರುತ್ತಾರೆ.

## ಮಾಸಿಕ ಸಂಭಾವನೆ:-

- ತಾಂತ್ರಿಕ ಸಂಯೋಜಕರ (TMIS) ಹುದ್ದೆಗೆ ಹುದ್ದೆಗೆ ಮಾಸಿಕ ಸಂಭಾವನೆ ರೂ.24.000/-ಗಳು ಹಾಗೂ ಪ್ರಯಾಣ ಭತ್ಯೆ ರೂ.2,000/-ಗಳು
- ತಾಂತ್ರಿಕ ಸಹಾಯಕ (ಸಿವಿಲ್) ಹುದ್ದೆಗೆ ಮಾಸಿಕ ಸಂಭಾವನೆ ರೂ.24,000/-ಗಳು (ಡಿಪ್ಲೋಮಾ ಅಭ್ಯರ್ಥಿಗಳಿಗೆ ರೂ.22,000/-ಗಳು ಹಾಗೂ ಪ್ರಯಾಣ ಭತ್ಯೆ ರೂ.2,000/-ಗಳು
- ತಾಂತ್ರಿಕ ಸಹಾಯಕ (ಕೃಷಿ. ಅರಣ್ಯ. ತೋಟಗಾರಿಕೆ) ಹುದ್ದೆಗೆ ಮಾಸಿಕ ಸಂಭಾವನೆ ರೂ.24,000/-ಗಳು (ಹಾಗೂ ಪ್ರಯಾಣ ಭತ್ಯೆ ರೂ.2,000/-ಗಳು
- ಆಡಳಿತ್ಮಾಕ ಸಹಾಯಕ & ಗಣಕ ಯಂತ್ರ ನಿರ್ವಾಹಕರು (ತಾ.ಪಂ) ಹುದ್ದೆಗೆ ಮಾಸಿಕ ಸಂಭಾವನೆ ರೂ.15,008/-ಗಳು ಅಥವಾ ಕಾರ್ಮಿಕ ಇಲಾಖೆಯು DEO ಹುದ್ದೆಗೆ ನಿಗದಿಪಡಿಸಿದ ಕನಿಷ್ಠ ಮಾಸಿಕ ಸಂಭಾವನೆ.

## ಆಯ್ಕೆಯ ವಿಧಾನ:-

ಈ ಕೆಳಕಂಡ ವಿಧಾನವನ್ನು ಅಳವಡಿಸಿ ಮೆರಿಟ್ ಪಟ್ಟಿ ಸಿದ್ಧಪಡಿಸಿ ಮೆರಿಟ್ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲಾಗುವುದು.

## ಹುದ್ದೆ: ತಾಲೂಕು ಸಂಯೋಜಕರು, (TMIS ) 01 ಹುದ್ದೆಗೆ

1. ಕನಿಷ್ಠ ವಿದ್ಯಾರ್ಹತೆಗೆ -100 ಅಂಕಗಳು
2. ಸ್ನಾತಕೊತ್ತರ ಪದವಿಗೆ -10 ಅಂಕಗಳು
3. ನಿಗದಿಪಡಿಸಿದ ಅನುಭವಕ್ಕೆ- 10 ಅಂಕಗಳು ಗರಿಷ್ಠ

   (ನಿಗದಿಪಡಿಸಿದ 36 ತಿಂಗಳು ಅಥವಾ ಹೆಚ್ಚಿನ ಅವಧಿಯ ಅನುಭವಕ್ಕೆ ಗರಿಷ್ಠ 10 ಅಂಕಗಳು (ಅಂದರೆ ಪ್ರತಿ ತಿಂಗಳ ಅನುಭವಕ್ಕೆ 0.28 ಅಂಕಗಳಂತೆ ಸಂಕಲನ ಮಾಡುವುದು) ಒಟ್ಟು -120 ಅಂಕಗಳು

## ಹುದ್ದೆ:- ತಾಂತ್ರಿಕ ಸಹಾಯಕ (TAE CIVIL)

1. ಕನಿಷ್ಠ ವಿದ್ಯಾರ್ಹತೆಗೆ -100 ಅಂಕಗಳು
2. ಸ್ನಾತಕೊತ್ತರ ಪದವಿಗೆ -10 ಅಂಕಗಳು
3. ನಿಗದಿಪಡಿಸಿದ ಅನುಭವಕ್ಕೆ- 10 ಅಂಕಗಳು ಗರಿಷ್ಠ

   (ನಿಗದಿಪಡಿಸಿದ 36 ತಿಂಗಳು ಅಥವಾ ಹೆಚ್ಚಿನ ಅವಧಿಯ ಅನುಭವಕ್ಕೆ ಗರಿಷ್ಠ 10 ಅಂಕಗಳು (ಅಂದರೆ ಪ್ರತಿ ತಿಂಗಳ ಅನುಭವಕ್ಕೆ 0.28 ಅಂಕಗಳಂತೆ ಸಂಕಲನ ಮಾಡುವುದು) ಒಟ್ಟು -120 ಅಂಕಗಳು

## ಹುದ್ದೆ:- ತಾಂತ್ರಿಕ ಸಹಾಯಕ ಕೃಷಿ/ತೋಟಗಾರಿಕೆ/ಅರಣ್ಯ

1. ಕನಿಷ್ಠ ವಿದ್ಯಾರ್ಹತೆಗೆ -60 ಅಂಕಗಳು
2. ಸ್ನಾತಕೊತ್ತರ ಪದವಿಗೆ -20 ಅಂಕಗಳು
3. ನಿಗದಿಪಡಿಸಿದ ಅನುಭವಕ್ಕೆ- 20 ಅಂಕಗಳು ಗರಿಷ್ಠ

   (ನಿಗದಿಪಡಿಸಿದ 36 ತಿಂಗಳು ಅಥವಾ ಹೆಚ್ಚಿನ ಅವಧಿಯ ಅನುಭವಕ್ಕೆ ಗರಿಷ್ಠ 20 ಅಂಕಗಳು (ಅಂದರೆ ಪ್ರತಿ ತಿಂಗಳ ಅನುಭವಕ್ಕೆ 0.56 ಅಂಕಗಳಂತೆ ಸಂಕಲನ ಮಾಡುವುದು) ಒಟ್ಟು -100 ಅಂಕಗಳು

## ಹುದ್ದೆ:- ಆಡಳಿತಾತ್ಮಕ ಸಹಾಯಕ/ಡಾಟಾ ಎಂಟ್ರೀ ಆಪರೇಟರ್

1. ಕನಿಷ್ಠ ವಿದ್ಯಾರ್ಹತೆಗೆ -100 ಅಂಕಗಳು
2. ಕಂಪ್ಯೂಟರ್ ಸಾಕ್ಷರತೆ ಪರೀಕ್ಷೆಗೆ:-50 ಅಂಕಗಳು
3. ಆಡಳಿತ್ಮಾಕ ಸಹಾಯಕರು (ತಾ.ಪಂ) ಹಾಗೂ ಡಿ.ಇ.ಒ 02 ಹುದ್ದೆಗೆ ಆಯ್ಕೆ ಮಾಡಲು ಕನಿಷ್ಟ ವಿದ್ಯಾರ್ಹತೆಯ ಆಧಾರದ ಮೇಲೆ ಮೇರಿಟ್ ಪಟ್ಟಿಯನ್ನು ಸಿದ್ಧಪಡಿಸಲಾಗುವುದು.
4. ಮೇರಿಟ್ ಪಟ್ಟಿಯಲ್ಲಿ ಹೆಚ್ಚು ಅಂಕ ಪಡೆದಿರುವ ಅಭ್ಯರ್ಥಿಗಳನ್ನು ಒಂದು ಹುದ್ದೆಗೆ 5 ರಂತೆ (1:5) ರ ಅನುಪಾತದಡಿ ಟೈಪಿಂಗ್ ಮತ್ತು ಕಂಪ್ಯೂಟರ್ ಟೆಸ್ಟ್ ಪರೀಕ್ಷೆ ಹಮ್ಮಿಕೊಳ್ಳಲಾಗುವುದು.
5. ಸದರಿ ಟೈಪಿಂಗ್ ಮತ್ತು ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆಯಲ್ಲಿ 25 ಕಿಂತ ಹೆಚ್ಚಿನ ಅಂಕ ಪಡೆದ ಅಭ್ಯರ್ಥಿಗಳನ್ನು ಮಾತ್ರ ಅಂತಿಮ ಮೇರಿಟ್ ಪಟ್ಟಿಗೆ ಪರಿಗಣಿಸಲಾಗುವುದು.
6. ಸದರಿ ಅಂತಿಮ ಆಯ್ಕೆ ಪಟ್ಟಿಯಲ್ಲಿ ಗರಿಷ್ಟ ಅಂಕಗಳನ್ನು ಪಡೆದ ಅಭ್ಯರ್ಥಿಗಳನ್ನು ಹೊರಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳಲಾಗುವುದು.
7. ಮಹಿಳಾ ಅಭ್ಯರ್ಥಿಗಳಿಗೆ ಆಯ್ಕೆ ಪ್ರಕ್ರಿಯೆಯಲ್ಲಿ ಶೇ 33% ರಷ್ಟು ಆದ್ಯತೆಯನ್ನು ನೀಡಲಾಗುವುದು.